# <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.</u>

**C.C No. 1254/2022**

| | | |
|---|---|---|
| ಸಾಕ್ಷಿದಾರರ ಹೆಸರು: | ಮಹೇಶ @ ಮಾದೇಶ | ಪ್ರಮಾಣ ಮಾಡಿದ ದಿನಾಂಕ 28.11.2025. |
| ತಂದೆಯ ಹೆಸರು: | ವೆಂಕಟಶೆಟ್ಟಿ | |
| ವಯಸ್ಸು: | 45 ವರ್ಷ | |
| ವೃತ್ತಿ: | ಕೂಲಿ ಕೆಲಸ | CW–8 |
| ವಾಸಸ್ಥಳ: | ಉತ್ತಂಬಳ್ಳಿ | PW–6 |

## <u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು, ಅವರು ನಮ್ಮ ಊರಿನವರು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಜಗಳವನ್ನು ನೋಡಿರುವುದಿಲ್ಲ ಮತ್ತು ಬಿಡಿಸಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ.)

## <u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ</u>

ದಿನಾಂಕ 15.05.2022 ರಂದು ಸಂಜೆ 4.30 ಗಂಟೆ ಸಮಯದಲ್ಲಿ ಚಾಸಾ- 1 ರಿಂದ 3 ರವರು ಅವರ ಮನೆಯ ಒಳಗಡೆ ಇದ್ದಾಗ ಈ ಪ್ರಕರಣದ ಆರೋಪಿ 1 ರವರು ತೀಟೆ ಜಗಳ ತೆಗೆದು ಯಾರು ಬೋಳಿ ಮಕ್ಕಳು, ಸೂಳೇ ಮಕ್ಕಳು ನನ್ನ ಮನೆಯ ಹತ್ತಿರ ನೆರಕೆ ಕಟ್ಟಿರುವುದು

ಎಂದು ನಮ್ಮ ಮನೆಯ ಮುಂಭಾಗ ಬೈಯ್ಯುತ್ತಿದ್ದಾಗ ಚಾಸಾ- 1 ಮತ್ತು ಚಾಸಾ- 2 ರವರು ಏಕೆ ನಮ್ಮನ್ನು ಬೈಯ್ಯುತ್ತಿಯಾ ನಾವು ನಮ್ಮ ಜಾಗದಲ್ಲಿ ನೆರಕೆಯನ್ನು ಕಟ್ಟಿಕೊಂಡಿರುತ್ತೇವೆ, ಹೊಸದಾಗಿ ಏನು ಕಟ್ಟಿಲ್ಲವೆಂದು ಹೇಳಿದಾಗ ಆರೋಪಿ 1 ರವರು ನಮ್ಮನ್ನು ಉದ್ದೇಶಿಸಿ ಬೋಳೀ ಮಕ್ಕಳೆ ಎಂದು ಬೈದು ಆರೋಪಿ 1 ರವರು ತಮ್ಮ ಬಲ ಕೈ ಯಿಂದ ಚಾಸಾ- 1 ರವರ ಬಲಕೈಗೆ ಹೊಡೆದು ಕೈ ಹಿಡಿದು ನೆಲಕ್ಕೆ ತಳ್ಳಿದ್ದು ಆ ಸಮಯದಲ್ಲಿ ಚಾಸಾ- 1 ರವರ ಬಲಕೈಗೆ ಪೆಟ್ಟಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿ 2 ರಿಂದ 4 ರವರು ಚಾಸಾ- 1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಮೈಕೈಗೆ ಹೊಡೆದಿದ್ದು ಚಾಸಾ- 1 ರವರು ತಪ್ಪಿಸಿಕೊಂಡು ಮನೆಗೆ ಹೋಗುತ್ತಿದ್ದಾಗ ಆರೋಪಿ 1 ರವರು ಚಾಸಾ- 1 ರವರ ಸೀರೆಯನ್ನು ಹಿಡಿದು ಎಳೆದು ಸಾರ್ವಜನಿಕವಾಗಿ ಅಮಾನಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಯು ಈಗ ಓದಿ ಹೇಳಿದ ಹಾಗೆ ಹೇಳಿಕೆಯನ್ನು ನಿರಾಕರಿಸಿರುತ್ತಾರೆ, ನಿರಾಕರಿಸಿದ ಹೇಳಿಕೆಯನ್ನು ನಿಪಿ- 9 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ಈಗ ಚಾಸಾ- 1 ಮತ್ತು 2 ರವರು ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ರಾಜಿ ಮಾಡಿಕೊಂಡ ಕಾರಣ ಆರೋಪಿತರನ್ನು ಶಿಕ್ಷೆಯಿಂದ ಪಾರು ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪಾಟೀ ಸವಾಲು: ಆರೋಪಿ ಪರ ವಕೀಲರರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.